# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1850 (1617)**

**ಸದಸ್ಯರ ಹೆಸರು : ಶ್ರೀ ಬಿ.ಜಿ. ಪಾಟೀಲ್**
**(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

**ಉತ್ತರಿಸುವವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು**

**ಉತ್ತರಿಸುವ ದಿನಾಂಕ : 15.03.2022**

| ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯು ಹೈದ್ರಾಬಾದ್-ಕರ್ನಾಟಕ ಪ್ರದೇಶದ ವ್ಯಾಪ್ತಿಯಲ್ಲಿ ಬರುವುದರಿಂದ ಈ ಭಾಗದ ಅಭಿವೃದ್ಧಿಗಾಗಿ ವಾಣಿಜ್ಯ ಮತ್ತು ಕೈಗಾರಿಕೆಗಳನ್ನು ಉತ್ತೇಜಿಸಲು ಸರ್ಕಾರವು ವಿಶೇಷ ಯೋಜನೆಯನ್ನು ಜಾರಿಗೆ ತರಲು ಯೋಚಿಸಿದೆಯೇ; (ವಿವರ ನೀಡುವುದು) | ಖಾಸಗಿ ಉದ್ದಿಮೆದಾರರು ಕೈಗಾರಿಕೆಗಳನ್ನು ಸ್ಥಾಪಿಸುವ ಸಂಬಂಧ ಉತ್ತೇಜನ ನೀಡಲು ಸರ್ಕಾರವು ನೂತನ ಕೈಗಾರಿಕಾ ನೀತಿ 2020-25 ನ್ನು ಜಾರಿಗೆ ತಂದಿರುತ್ತದೆ.<br>ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳನ್ನು ಈ ನೀತಿಯಲ್ಲಿ ಅತ್ಯಂತ ಹಿಂದುಳಿದ ತಾಲ್ಲೂಕುಗಳೆಂದು ವಲಯ-1 ರಲ್ಲಿ ವರ್ಗೀಕರಿಸಲಾಗಿದ್ದು, ಹೆಚ್ಚಿನ ಪ್ರಮಾಣದ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ನೀಡಲು ಅವಕಾಶ ಕಲ್ಪಿಸಲಾಗಿರುತ್ತದೆ. |
| ಆ | ಯೋಚಿಸಿದ್ದಲ್ಲಿ, ಈ ಯೋಜನೆಗಳು ಯಾವುವು? (ವಿವರ ನೀಡುವುದು) | ಸರ್ಕಾರದ ನೂತನ ಕೈಗಾರಿಕಾ ನೀತಿ 2020-25 ರನ್ವಯ ಈ ಕೆಳಕಂಡ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ನೀಡಲು ಅವಕಾಶ ಕಲ್ಪಿಸಲಾಗಿರುತ್ತದೆ.<br>1. ಬಂಡವಾಳ ಹೂಡಿಕೆ ಸಹಾಯಧನ/ ವಹಿವಾಟು ಆಧಾರಿತ ಹೂಡಿಕೆ ಸಹಾಯಧನ<br>2. ಮುದ್ರಾಂಕ ಶುಲ್ಕ ರಿಯಾಯಿತಿ ಹಾಗೂ ನೋಂದಣಿ ಶುಲ್ಕ ವಿನಾಯಿತಿ<br>3. ಭೂ ಪರಿವರ್ತನಾ ಶುಲ್ಕ ಮರುಪಾವತಿ<br>4. ವಿದ್ಯುತ್ ಶುಲ್ಕದ ಮೇಲಿನ ತೆರಿಗೆ ವಿನಾಯಿತಿ<br>5. ವಿದ್ಯುಚ್ಛಕ್ತಿ ಸಹಾಯಧನ<br>6. ಇ.ಟಿ.ಪಿ. ಸಹಾಯಧನ<br>7. ಐ.ಎಸ್.ಓ/ ಐ.ಎಸ್.ಐ ಪ್ರಮಾಣ ಪತ್ರದ ವೆಚ್ಚದ ಮರುಪಾವತಿ<br>8. ರಫ್ತು ಘಟಕಗಳಿಗೆ ಪ್ರೋತ್ಸಾಹ<br>9. ಮಳೆ ನೀರು ಕೊಯ್ಲು/ ಸಂರಕ್ಷಣೆ ಪ್ರೋತ್ಸಾಹ<br>10. ಗುಣಮಟ್ಟ ಪ್ರಮಾಣೀಕರಣಕ್ಕೆ ಉತ್ತೇಜನ<br>11. ಆ್ಯಂಕರ್ ಘಟಕ ಸಹಾಯಧನ |

| | | |
|---|---|---|
| | | ಮುಂದುವರೆದಂತೆ, ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ 2013–14 ರಿಂದ ಪ್ರಸ್ತುತದವರೆಗೆ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಹಾಗೂ ರಾಜ್ಯ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಗಳಲ್ಲಿ ಈ ಕೆಳಕಂಡಂತೆ ಯೋಜನೆಗಳಿಗೆ ಅನುಮೋದನೆ ನೀಡಲಾಗಿರುತ್ತದೆ. |

| ಕ್ರ ಸಂ. | ಜಿಲ್ಲೆ | ಘಟಕಗಳು | ಹೂಡಿಕೆ | ಉದ್ಯೋಗಾವಕಾಶ |
|---|---|---|---|---|
| 1 | ಕಲಬುರಗಿ | 08 | 1189.02 | 1447 |
| 2 | ಯಾದಗಿರಿ | 87 | 3872.17 | 18321 |

ಸಿಐ 67 ಎಸ್‌ಪಿಐ 2022

(ಡಾ॥ ಮುರುಗೇಶ ಆರ್. ನಿರಾಣಿ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು